# ನೇಪಥ್ಯಕ್ಕೆ ಸರಿದ ಕೂಡ್ಲಿಗಿಯ ಶಾರದೆ



**ಶಿವಕುಮಾರಿ ಕೂಡ್ಲಿಗಿ ಕರ್ನಾಟಕದ ವೃತ್ತಿ ರಂಗಭೂಮಿ ರೂಪಿಸಿದ ಅತ್ಯುತ್ತಮ ಕಲಾವಿದೆಯಲ್ಲೊಬ್ಬರು. ಮೂರು ಸಾವಿರಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಅಭಿನಯಿಸಿದ ಕೀರ್ತಿ ಅವರದು.**

ದಸ್ತಗೀರಸಾಬ್ ದಿನ್ನಿ

ವೃತ್ತಿ ರಂಗಭೂಮಿಗೆ ಬಳ್ಳಾರಿ ಜಿಲ್ಲೆಯ ನಟಿಯರ ಕೊಡುಗೆ ಅನುಪಮವಾದುದು. ಸುಭದ್ರಮ್ಮ ಮನ್ಸೂರು, ಲಲಿತಮ್ಮ, ನಾಗಮ್ಮ, ರಮಾದೇವಿ, ಕಪಗಲ್ಲು ಪದ್ಮಮ್ಮ, ಚಾಮುಂಡಿ ಯಳ್ಳಾರ್ತಿ, ಸುಜಾತಮ್ಮ, ನಾಗರತ್ನಮ್ಮ, ವೀಣಾಕುಮಾರಿ ಆದೋನಿ, ಲತಾಶ್ರೀ ಮುಂತಾದವರು ನಟನೆ–ಹಾಡುಗಾರಿಕೆಯ ಮೂಲಕ ತಮ್ಮ ಇಡೀ ಬದುಕನ್ನು ರಂಗಭೂಮಿಗಾಗಿಯೇ ಮುಡುಪಾಗಿಟ್ಟವರು. ಆ ಪರಂಪರೆಗೆ ಸಲ್ಲುವ ಬಿ. ಶಿವಕುಮಾರಿ ಕೂಡ್ಲಿಗಿ (56) ಕಳೆದ ಆಗಸ್ಟ್ 12ರಂದು ಹೃದಯಾಘಾತದಿಂದ ಕೊನೆಯುಸಿರೆಳೆದರು.

ಕೂಡ್ಲಿಗಿಯ ಶಾರದಮ್ಮ ಅವರ ಪುತ್ರಿ ಬಾಣದ ಶಿವಕುಮಾರಿ ಪರಿಶಿಷ್ಟ ಪಂಗಡದ ಕೃಷಿ ಕುಟುಂಬದಲ್ಲಿ ಜನಿಸಿದವರು. ಹತ್ತನೆಯ ತರಗತಿಯವರೆಗೆ ಮಾತ್ರ ಓದಿದ್ದ ಅವರಿಗೆ ಓದುವ ಅದಮ್ಯ ಆಸಕ್ತಿ ಇತ್ತು. ಮನೆಗೆ ಹಿರಿಯ ಮಗಳಾಗಿದ್ದರಿಂದ ಕುಟುಂಬದ ಜವಾಬ್ದಾರಿ ಶಿಕ್ಷಣಕ್ಕೆ ಅಡ್ಡಿಯಾಯಿತು. ಮನೆಯ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿತ್ತು. ಹೊಟ್ಟೆಪಾಡಿಗಾಗಿ ಆಯ್ಕೆ ಮಾಡಿಕೊಂಡಿದ್ದು ರಂಗಭೂಮಿ. ಬಾಲ್ಯದಿಂದಲೇ ನಟನೆಯ ಬಗೆಗೆ ಆಸಕ್ತಿ ಮತ್ತು ಪ್ರೀತಿಯನ್ನು ಬೆಳೆಸಿಕೊಂಡು ಬಂದಿದ್ದರು.

ಆಗ ಕೂಡ್ಲಿಗಿ, ಮರಿಯಮ್ಮನ ಹಳ್ಳಿಯಲ್ಲಿ ನಿರಂತರವಾಗಿ ನಡೆಯುತ್ತಿದ್ದ ರಂಗ ಚಟುವಟಿಕೆಗಳು ಅವರ ಸಾಂಸ್ಕೃತಿಕ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದವು.

1984ರ ಸಂದರ್ಭ. ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಗೌಡಗೊಂಡನಹಳ್ಳಿಯಲ್ಲಿ ನಡೆದ 'ಪ್ರೇಮ ಪಂಜರ' ನಾಟಕದಲ್ಲಿ ಶಿವಕುಮಾರಿ ಅವರದು ನಾಯಕಿಯ ಪಾತ್ರ. ಮೊಟ್ಟ ಮೊದಲಿಗೆ ಬಣ್ಣ ಹಚ್ಚಿದ್ದ ಪಾತ್ರವದು. ರಕ್ತರಾತ್ರಿ, ಕುರುಕ್ಷೇತ್ರ, ವೀರ ಅಭಿಮನ್ಯು, ಅಕ್ಷಯಾಂಬರ, ಚಿತ್ರಾಂಗದ, ಗುಡ್ಡಮ್ಮ ದೇವಿ ಮಹಾತ್ಮೆ, ಹೇಮರೆಡ್ಡಿ ಮಲ್ಲಮ್ಮ, ಛತ್ರಪತಿ ಶಿವಾಜಿ, ಗೌರಿ ಗೆದ್ದಳು, ಅಣ್ಣ ತಂಗಿ, ಹೆಣ್ಣಿನ ಹಂಬಲ, ಆಶಾ ಲತಾ, ಹಸಿರು ಬಳೆ, ಆದರ್ಶ ಪ್ರೇಮ – ಹೀಗೆ ಅನೇಕ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳ ಪಾತ್ರಗಳಿಗಾಗಿ ಮುಖಕ್ಕೆ ಬಣ್ಣ ಹಚ್ಚಿಕೊಂಡರು. ನಾಯಕಿ, ಖಳನಾಯಕಿ, ಪೋಷಕ ಪಾತ್ರಗಳಲ್ಲಿ ತನ್ಮಯತೆಯಿಂದ ಅಭಿನಯಿಸಿ ಕಲಾಪ್ರೇಮಿಗಳ ಅಭಿಮಾನಕ್ಕೆ ಪಾತ್ರರಾದರು. ವಿಶೇಷವಾಗಿ ಭಾವೋದ್ವೇಗದ ಪಾತ್ರಗಳಲ್ಲಿ ಅಭಿನಯಿಸಿ ಪ್ರೇಕ್ಷಕರಿಂದ ಸೈ ಎನಿಸಿಕೊಂಡಿದ್ದರು.

ಶಿವಕುಮಾರಿಯವರನ್ನು ಕಲಾಪ್ರೇಮಿಗಳು 'ರಂಗಭೂಮಿಯ ಕಲಾ ಕುಸುಮ' ಎಂದು ಕರೆಯುತ್ತಿದ್ದರು. ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಹಳ್ಳಿಗಳಲ್ಲಿ ಹವ್ಯಾಸಿ ಕಲಾವಿದರು ಏರ್ಪಡಿಸುವ ನಾಟಕಗಳಲ್ಲಿ ಅವರು ಹೆಚ್ಚು ಸೇವೆ ಸಲ್ಲಿಸಿದ್ದರು. 80–90ರ ದಶಕದಲ್ಲಿ ರಂಗಭೂಮಿಯ ಬೇಡಿಕೆಯ ನಟಿಯಾಗಿದ್ದರು. ಪ್ರಮುಖ ವೃತ್ತಿ ರಂಗಭೂಮಿ ಕಂಪನಿಗಳಲ್ಲೂ ಅತಿಥಿ ನಟಿಯಾಗಿ ಸೇವೆ ಸಲ್ಲಿಸಿದ್ದರು. ಬಯಲಾಟ ಕಲೆಗಾಗಿ ನೆರೆಯ ರಾಜ್ಯ ಆಂಧ್ರದಲ್ಲೂ ತಮ್ಮ ಕಲಾಪ್ರತಿಭೆಯನ್ನು ಬೆಳಗಿದ್ದರು.



ಅವರು ನಟಿಸಿರುವ ಪ್ರದರ್ಶನಗಳ ಸಂಖ್ಯೆ ಮೂರು ಸಾವಿರ ದಾಟಿದೆ. ಮೃದು ಸ್ವಭಾವದ, ನಸುಗಪ್ಪು ಬಣ್ಣದ ಶಿವಕುಮಾರಿಯವರದು ದುಂಡು ಮುಖ. ಸೆಳೆಯುವ ಕಂಗಳು, ಸ್ಪಷ್ಟ ಉಚ್ಚಾರದ, ಮೋಡಿ ಮಾಡುವ ಮಾಗಿದ ಅಭಿನಯದ ಅವರು ನಾಟಕದಲ್ಲಿ ಅಭಿನಯಿಸುತ್ತಾರೆಂದರೆ ನೆರೆಯ ಹಳ್ಳಿಗಳಿಂದ ಕಲಾಪ್ರೇಮಿಗಳು ಸಾಲುಗಟ್ಟಿ ಬರುತ್ತಿದ್ದರು.

ಶಿವಕುಮಾರಿ ಸಿನಿಮಾ ಮತ್ತು ಕಿರುತೆರೆ ಧಾರಾವಾಹಿಗಳಲ್ಲೂ ನಟಿಸಿದ್ದರು. ಧಾರವಾಡ ಆಕಾಶವಾಣಿ ಕೇಂದ್ರದಿಂದ 'ಬಿ' ಶ್ರೇಣಿ ಕಲಾವಿದರೆಂದು ಅರ್ಹತೆ ಪಡೆದುಕೊಂಡಿದ್ದರು. 'ಕೂಡ್ಲಿಗಿಯ ಅಭಿನಯ ಶಾರದೆ' ಎಂದು ಖ್ಯಾತಿ ಗಳಿಸಿ, ಐವತ್ತಾರು ವರ್ಷಗಳ ಕಾಲ ಅರ್ಥಪೂರ್ಣವಾಗಿ ಬದುಕಿದ್ದರು. ಮೂವತ್ತೈದು ವರ್ಷಗಳ ಕಾಲ ರಂಗಭೂಮಿಯಲ್ಲಿ ಧ್ರುವತಾರೆಯಂತೆ ಮಿನುಗಿದ್ದರು. ಹೆಚ್ಚಿನ ಆಸೆ ಪಡದೆ ಇದ್ದುದ್ದರಲ್ಲೇ ತೃಪ್ತಿಯನ್ನು ಪಟ್ಟಿದ್ದರು. ನಾಟಕ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ, ಸುಭದ್ರಮ್ಮ ಮನ್ಸೂರು ಪ್ರಶಸ್ತಿ, ಮರಿಯಮ್ಮನಹಳ್ಳಿ ಲಲಿತಕಲಾ ಪ್ರಶಸ್ತಿ, ಆಂಧ್ರದ ನಂದಿ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಸಂದಿವೆ.

ಪ್ರತಿಕ್ರಿಯಿಸಿ: feedback@sudha.co.in